Round (1)

ದೇಶೀಯ ತಂತ್ರಾಂಶ

(ದೇಶೀಯ)

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1491
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 24.09.2021.

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಬೀದರ್ ಜಿಲ್ಲೆಯಲ್ಲಿನ ಹಲವು ಗ್ರಾಮಗಳಿಗೆ ಇನ್ನೂ ಕೂಡ ಬಸ್ಸು ಸಂಚಾರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಆ ಗ್ರಾಮಗಳು ಯಾವುವು;	ಬೀದರ ಜಿಲ್ಲೆಯಲ್ಲಿ ಒಟ್ಟು:667 ಗ್ರಾಮಗಳಿದ್ದು, 664 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಉಳಿದ 03 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.
ಆ.	ಸದರಿ ಗ್ರಾಮಗಳ ಬಸ್ಸುಗಳು ಇಲ್ಲದ ಗ್ರಾಮಗಳಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು;	ಸದರಿ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸದೇ ಇರಲು ಕಾರಣವನ್ನು **ಅನುಬಂಧ**ದಲ್ಲಿ ನೀಡಲಾಗಿದೆ.
ಇ)	ಬಸ್ಸು ಸಂಚಾರ ಇಲ್ಲದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮೊಟಕುಗೊಂಡಿರುವುದೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿ ಈಗಾಗಲೇ ಸಂಚಾರ ಸೌಕರ್ಯವನ್ನು ಕಲ್ಪಿಸಲಾಗಿರುತ್ತದೆ. ಇನ್ನೂ ಹೆಚ್ಚಿನ ಬೇಡಿಕೆಗಳು ಬಂದಲ್ಲಿ, ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 231 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-'ಅ'

ಕ್ರ. ಸಂ	ತಾಲ್ಲೂಕು	ಗ್ರಾಮದ ಹೆಸರು	ಸಾರಿಗೆ ಸೌಲಭ್ಯ ಒದಗಿಸದೇ ಇರಲು ಕಾರಣ	ಸದರಿ ಗ್ರಾಮಕ್ಕೆ ಪ್ರಸ್ತುತ ಎಲ್ಲಿವರೆಗೆ ಬಸ್ ಸೇವೆ ಒದಗಿಸಲಾಗಿದೆ
1	ಕಮಲನಗರ	ಮುತಖೇಡ	ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 2.5 ಕಿ.ಮೀ ಅಂತರದಲ್ಲಿರುತ್ತದೆ. ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿ ಪೂರ್ಣಗೊಂಡ ನಂತರ ಸಾರಿಗೆ ಸೌಲಭ್ಯ ಒದಗಿಸಲಾಗುವುದು.	ಔರಾದ-ದಾಬಕಾ-ಉದಗೀರ ಮಾರ್ಗವಾಗಿ ಪ್ರತಿದಿನ 05 ಸರತಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ.
2	ಔರಾದ	ನಾಗೂರ (ಬಾಬಜಿ)	ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 1.0 ಕಿ.ಮೀ ಅಂತರದಲ್ಲಿದ್ದು, ಗ್ರಾಮದ ಒಳಗೆ ಬಸ್ ತಿರುಗಿಸಲು ಸ್ಥಳ ಇರುವುದಿಲ್ಲ.	ಔರಾದ-ಸಂತಪೂರ-ಸಂಗಮ ಕ್ರಾಸ್ ಮಾರ್ಗ ವಾಗಿ ಭಾಲ್ಕಿಗೆ ಪ್ರತಿದಿನ 20 ಸರತಿಗಳ ಕಾರ್ಯಾಚರಣೆಯಲ್ಲಿದ್ದು, ಸದರಿ 20 ಸರತಿಗಳು ನಾಗೂರ (ಬಾಬಜಿ) ಮುಖ್ಯ ರಸ್ತೆಗೆ ನಿಲುಗಡೆ ಮಾಡುತ್ತಿವೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ.
3	ಭಾಲ್ಕಿ	ಏಕಲಾಸಪೂರ	ಸದರಿ ಗ್ರಾಮವು ಆನಂದವಾಡಿ ಗ್ರಾಮದಿಂದ 5.0 ಕಿ.ಮೀ ಅಂತರದಲ್ಲಿರುತ್ತದೆ. ಸದರಿ ಗ್ರಾಮಕ್ಕೆ ಇಲ್ಲಿಯವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.	ಭಾಲ್ಕಿ ಪಟ್ಟಣದಲ್ಲಿ ರಸ್ತೆಯು ತೀರಾ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಚರಣೆಗೆ ಯೋಗ್ಯವಾಗಿರುವುದಿಲ್ಲ. ಅನಂದವಾಡಿವರೆಗೆ 03 ಸುತ್ತುವಳಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ.